ಶ್ರೀ ಡಿ.ವಿ. ಸದಾನಂದಗೌಡ :– ನಾವು ಹೇಳುವುದೇನೆಂದರೆ, ಈಗಾಗಲೇ ಕೇಂದ್ರ ಸರ್ಕಾರ 4092 ರೂಪಾಯಿ ಏನು ನಿಗದಿ ಪಡಿಸಿದೆ ಅದರಂತೆ ಖರೀದಿಸುವುದಕ್ಕೆ ಒಂದು ಕೋಟಿ ರೂಪಾಯಿಗಳನ್ನು ನಾವು ಜಿಲ್ಲಾಧಿಕಾರಿಗಳಿಗೆ ಮಾರ್ಚ್ 24ನೇ ತಾರೀಖಿನಲ್ಲಿ ಬಿಡುಗಡೆ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ :– ರಾಜ್ಯ ಸರ್ಕಾರದಿಂದ ಎಷ್ಟು ಹಣ ಕೊಡುತ್ತೀರಿ ಎನ್ನುವುದನ್ನು ಹೇಳಿ.

ಶ್ರೀ ಡಿ.ವಿ. ಸದಾನಂದಗೌಡ :– ಅದು ಕೊಡುತ್ತೇವೆ. ನಮ್ಮ ಕೃಷಿ ಮಂತ್ರಿಯವರು ಇವತ್ತು ಲಭ್ಯವಿಲ್ಲ. ಕೃಷಿ ಮಂತ್ರಿಯವರು ನಾಳೆ ಬಂದ ತಕ್ಷಣ ಉಳಿದ ಏನು ಹೆಚ್ಚಿನ ಮಾಹಿತಿಗಳು ಇವೆ ಅದನ್ನು ಸದನಕ್ಕೆ ಕೊಟ್ಟು ಮಾಡುವಂತಹ ಕೆಲಸ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ :– ದಯಮಾಡಿ, ರೈತರು ಸ್ವಲ್ಪ ಸಮಾಧಾನವಾಗಿ ಬದುಕಲಿ.

ಶ್ರೀ ಡಿ.ವಿ. ಸದಾನಂದಗೌಡ :– ಖಂಡಿತ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ :– 4092 ರೂಪಾಯಿಗಳನ್ನು ಕೇಂದ್ರ ಸರ್ಕಾರ ನಿಗದಿ ಮಾಡಿದೆ. ಅದರ ಜೊತೆಗೆ, ರಾಜ್ಯ ಸರ್ಕಾರದವರು 3 ಸಾವಿರ ರೂಪಾಯಿಗಳನ್ನು ಸೇರಿಸಿಕೊಡಿ.

ಶ್ರೀ ಡಿ.ವಿ. ಸದಾನಂದಗೌಡ :– ಪ್ರತಿಪಕ್ಷದ ನಾಯಕರು ಈಗ ಏನು ಪ್ರಸ್ತಾಪ ಮಾಡಿದ್ದಾರೆ, ನಮ್ಮ ಕೃಷಿ ಮಂತ್ರಿಯವರು ಮೊನ್ನೆಯಿಂದ ಚರ್ಚೆ ಮಾಡಿ ಕೆಲಸ ಮಾಡುತ್ತಿದ್ದಾರೆ. ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಅವರು ಬಂದ ತಕ್ಷಣ ಸದನದಲ್ಲಿ ಉತ್ತರ ಕೊಡಿಸುವಂಥದ್ದು ಮತ್ತು ಖರೀದಿ ಮಾಡಿಸುವ ಜವಾಬ್ದಾರಿ ಸರ್ಕಾರಕ್ಕಿದೆ, ಅದನ್ನು ಮಾಡಿಸುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ :– ಸನ್ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವುದೇನೆಂದರೆ, ಕೇವಲ ಮೈಸೂರು ಜಿಲ್ಲೆಯಲ್ಲ, ಹಾಸನ ಜಿಲ್ಲೆಯಲ್ಲೂ ಕೂಡ ಅರಿಶಿನ ಬೆಳೆದಿದ್ದಾರೆ. ದಯಮಾಡಿ, ಹಾಸನ ಜಿಲ್ಲೆಯಲ್ಲಿ ಬೆಳೆದ ಬೆಳೆಗಾರರಿಗೂ ಸಹಾಯ ಮಾಡಿ.

4. ವಿಷಯ :– **ಕೆ.ಇ.ಬಿ.ಯವರು ವಿದ್ಯುತ್ ಕಂಬ ಹಾಕುವುದು, ಲೈನ್ ಎಳೆಯುವುದರ ಬಗ್ಗೆ**

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ :– ಮಾನ್ಯ ಅಧ್ಯಕ್ಷರೆ, ಇದುವರೆಗೂ ಕೊರೆದ ಕೊಳವೆ ಬಾವಿಗಳು ಅದು ಖಾಸಗಿ ಇರಬಹುದು, ರೈತರದ್ದು

ಇರಬಹುದು ಅಥವಾ ಕುಡಿಯುವ ನೀರಿನದ್ದು ಇರಬಹುದು. ಇದಕ್ಕೆ ಕೆಇಬಿಯವರೇ ಕಂಬ ಹಾಕುವುದು ಮುಂತಾದವು ಮಾಡುತ್ತಿದ್ದರು. ಈಗ ಹೊಸ ಪಾಲಿಸಿ ತಂದು self execution ಎಂದು ಒಂದು ಸ್ಕೀಂ ಮಾಡಿದ್ದಾರೆ. ಕಂಬ ಹಾಕುವುದಿರಬಹುದು, ಲೈನ್ ಎಳೆಯುವುದಿರಬಹುದು ಅದನ್ನು ರೈತರೇ ಮಾಡಿಕೊಳ್ಳಬೇಕೆಂದು ಎಸ್ಕಾಂ ಇಲಾಖೆಯಿಂದ ಹೊಸ ಸುತ್ತೋಲೆ ಹೊರಡಿಸಿದ್ದಾರೆ. ಜೊತೆಗೆ, ಕುಡಿಯುವ ನೀರಿಗೂ ಅದೇ ಸ್ಕೀಂ ಅನ್ನು ಮಾಡಬೇಕೆಂದು ಹೇಳಿದ್ದಾರೆ. ಕುಡಿಯುವ ನೀರಿಗಾದರೆ, ಈ ಸ್ಕೀಂ ನಲ್ಲಿ ಬೋರ್‌ವೆಲ್ ಕೊರೆದರೆ ಪಂಪ್ ಹಾಕುವುದು, ಕಂಬ ಹಾಕುವುದು ಬಹಳ ತಡವಾಗುತ್ತದೆ. ಈ ಸ್ಕೀಂನಿಂದ ಕುಡಿಯುವ ನೀರಿಗೆ ಬಹಳ ತೊಂದರೆಯಾಗುತ್ತದೆ. ಅದಕ್ಕೆ ವಿನಾಯಿತಿ ಕೊಡಬೇಕು. ನಮ್ಮ ಜಿಲ್ಲೆಯಲ್ಲಿ ಕೊರೆದ ಸುಮಾರು ಕೊಳವೆ ಬಾವಿಗಳಿಗೆ ಈಗ ಸರ್ವೀಸ್ ಆಗುತ್ತಿಲ್ಲ. ಏಕೆಂದರೆ, ಈ ಸ್ಕೀಂನಡಿಯಲ್ಲಿ ಅವರೇ ಕಂಬ ಮುಂತಾದುವನ್ನು ಹಾಕಿಕೊಳ್ಳಬೇಕೆಂದಿದೆ. ದಯವಿಟ್ಟು, ಕುಡಿಯುವ ನೀರಿಗೆ ಸಂಬಂಧಿಸಿದ ಕೊಳವೆ ಬಾವಿಗೆ ವಿನಾಯಿತಿ ಕೊಡಬೇಕು. ಈಗೇನು ಜಾರಿಯಲ್ಲಿದೆ, ಅದೇ ಪದ್ಧತಿಯಲ್ಲೇ ಮಾಡಿ ತಕ್ಷಣ ಪವರ್ ಕನೆಕ್ಷನ್ ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಯವರಲ್ಲಿ ಕೇಳುತ್ತೇನೆ.

ಕು. ಶೋಭಾ ಕರಂದ್ಲಾಜೆ (ಇಂಧನ ಸಚಿವರು) :– ಕುಡಿಯುವ ನೀರಿನ ಯೋಜನೆಗಳು ವರ್ಷಕ್ಕೆ ಸುಮಾರು ಮೂರೂವರೆ ಸಾವಿರ ಹೊಸದಾಗಿ ಸೇರ್ಪಡೆಯಾಗುತ್ತಿವೆ. ಇದರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ನಗರಾಭಿವೃದ್ಧಿಗೆ ಸಂಬಂಧಪಟ್ಟಂತಹ ಮೂರೂವರೆ ಸಾವಿರ ಅರ್ಜಿಗಳು ಪ್ರತಿವರ್ಷ ಬರುತ್ತಿವೆ. ಈ ಅರ್ಜಿ ಬಂದ ತಕ್ಷಣ ಗ್ರಾಮೀಣಾಭಿವೃದ್ಧಿ ಇಲಾಖೆಯವರು ನಮ್ಮ ಎಸ್ಕಾಂಗಳಿಗೆ ಹಣವನ್ನು ಕಟ್ಟಿಕೊಡಬೇಕಾಗಿತ್ತು. ಅದರ ಆಧಾರದ ಮೇಲೆ ಅವರು ಕಂಬಗಳನ್ನು ಹಾಕುವಂಥದ್ದು ಮತ್ತು connection ಕೊಡುವುದನ್ನು ಮಾಡುತ್ತಿದ್ದರು. ಆದರೆ, ನಗರಾಭಿವೃದ್ಧಿ ಇರಬಹುದು ಅಥವಾ ಗ್ರಾಮೀಣಾಭೀವೃದ್ಧಿ ಇಲಾಖೆ ಇರಬಹುದು ಬೇರೆ ಬೇರೆ ಕಾರಣದಿಂದ ಹಣ ಕಟ್ಟುವುದು ವ್ಯತ್ಯಾಸವಾಗುತ್ತಿತ್ತು. ದಿನಗಳು ಹೆಚ್ಚುಕಡಿಮೆಯಾಗುತ್ತಿತ್ತು. ನಮಗೆ ಎಷ್ಟು ಖರ್ಚಾಗುತ್ತದೆಯೋ ಅಷ್ಟು ಹಣವನ್ನು ಅವರು ಕಟ್ಟುತ್ತಿರಲಿಲ್ಲ. ಅದು ನಿಮಗೂ ಗೊತ್ತಿದೆ. ಅದು fixed amount ಇದೆ. ತಡವಾಗುತ್ತದೆನ್ನುವ ಕಾರಣಕ್ಕಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಈ ಬಾರಿ ಮೊದಲಸಾರಿಗೆ ನಾವೇ self execution ಮಾಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ಅವರ ಸುತ್ತೋಲೆ ಬಂದಿದೆಯೇ ಹೊರತು ನಾವು ಸುತ್ತೋಲೆ

ಹೊರಡಿಸಿಲ್ಲ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯವರು ನಮ್ಮ ಕುಡಿಯುವ ನೀರಿನ ಯೋಜನೆಯನ್ನು ನಾವೇ ಮಾಡಿಕೊಳ್ಳುತ್ತೇವೆ, ನೀವು technical support ಕೊಡಿ ಎಂದು ನಮ್ಮನ್ನು ಕೇಳಿದ್ದಾರೆ. ಅದಕ್ಕಾಗಿ technical support ಕೊಡುವುದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ಅದಕ್ಕೆ 5% service charge ಎಂದು ಕಟ್ಟಿಸಿಕೊಳ್ಳುತ್ತಿದ್ದೇವೆ. ಉಳಿದಂತೆ ಎಲ್ಲ ಕೆಲಸವನ್ನೂ ತಾವೇ ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಅದರಂತೆ ಅದು ನಡೆಯುತ್ತಿದೆ. ಇದರಲ್ಲಿ ವ್ಯತ್ಯಾಸವಾಗಬೇಕಾದರೆ ಪುನಃ ಗ್ರಾಮೀಣಾಭಿವೃದ್ಧಿ ಇಲಾಖೆಯವರು ಇದರ ಕುರಿತು ಯೋಚನೆಯನ್ನು ಮಾಡಬೇಕು.

5. ವಿಷಯ :– ಆಲೂಗೆಡ್ಡೆ ಬೆಳೆಗೆ ಅಂಗಮಾರಿ ರೋಗ ಬಂದು ನಷ್ಟವಾಗಿರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) :– ಕಳೆದ ಮೂರು ವರ್ಷಗಳಿಂದ ಅಂದರೆ 2008–09 ರಲ್ಲಿ 77 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಆಲೂಗೆಡ್ಡೆ ಬೆಳೆಯಲಾಗಿತ್ತು. ಮತ್ತೆ 2009–10ರಲ್ಲಿ ಸುಮಾರು 17 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಆಲೂಗೆಡ್ಡೆ ಬೆಳೆಯಲಾಗಿತ್ತು. ಕಳೆದ ಮೂರು ವರ್ಷಗಳಿಂದ ಅಂಗಮಾರಿ ರೋಗ ಬಂದು ಸುಮಾರು 250 ಕೋಟಿ ರೂಪಾಯಿಗಳಷ್ಟು ಬೆಳೆ ನಷ್ಟವಾಗಿದೆ. ಕೇವಲ ಕೇಂದ್ರ ಸರ್ಕಾರದಿಂದ 10 ಕೋಟಿ ರೂ. ಬಂದಿದೆ. ಒಂದು ಎಕರೆಗೆ 1 ಸಾವಿರ ರೂ. ನಂತೆ 5 ಲಕ್ಷ ರೂ. ಕೊಡಲಾಗಿದೆ. ಅದೇನೋ ಈಗ ಆಲೂಗೆಡ್ಡೆ ಬೆಳೆ ಬಿಟ್ಟುಬಿಟ್ಟು, ಶುಂಠಿ ಅರಿಶಿನಕ್ಕೆ ಹೋದರು. ಶುಂಠಿ ಅರಿಶಿನ ಕ್ವಿಂಟಾಲ್‌ಗೆ 1300, 1400 ರೂ. ಇದ್ದದ್ದು ಇವತ್ತು ಕ್ವಿಂಟಾಲ್‌ಗೆ 200–300 ರೂ.ಗಳಿಗೂ ಕೊಂಡುಕೊಳ್ಳುವವರು ಇಲ್ಲ. ಅದರಿಂದ ಅದನ್ನು ಬೆಳೆದ ಕೆಲವು ರೈತರು ಬೆಲೆ ಇಲ್ಲದಿರುವುದರಿಂದ ಕೀಳದೆ ಗದ್ದೆಯಲ್ಲಿಯೇ ಬಿಟ್ಟುಬಿಟ್ಟಿದ್ದಾರೆ. ಅದರಿಂದ ಇವತ್ತು ಲಕ್ಷಾಂತರ, ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ. ನಮ್ಮ ಹಾಸನ ಜಿಲ್ಲೆಯಲ್ಲಿ ಆಲೂಗೆಡ್ಡೆಯೇ ಮುಖ್ಯ ಬೆಳೆ. ಅದು ಬಿಟ್ಟರೆ, ರಾಗಿ, ಜೋಳ ಬೆಳೆಯಲಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುತ್ತೇನೆ. ಮಾನ್ಯ ತೋಟಗಾರಿಕೆ ಮಂತ್ರಿಯವರು ಸದನದಲ್ಲಿದ್ದಾರೆ. ಮೂರು ವರ್ಷಗಳಲ್ಲಿ ಆಲೂಗೆಡ್ಡೆ ಬೆಳೆ ಬೆಳೆದಿರುವುದರಿಂದ ಸುಮಾರು 250 ಕೋಟಿ ರೂ. ನಷ್ಟವಾಗಿದೆ. ರಾಜ್ಯ ಸರ್ಕಾರದಿಂದ 10 ರೂಪಾಯಿ ಸಹ ಕೊಟ್ಟಿಲ್ಲ.

ಅಧ್ಯಕ್ಷರು :– ತಾವು ಪ್ರಸ್ತಾಪ ಮಾಡಿದ್ದೀರಿ. ಉತ್ತರ ಹೇಳುವುದಕ್ಕೆ ಬಿಡಿ.